ಯಾರು ನೀನು?


ಪರಿಮಿತಿಯದಪರಿಮಿತ ದಾರಿ ಕಂಡು
ಮರೆದ ಜೀವದೊಳಹಂಕಾರ ಕರಗಿ
ನಿರಪೇಕ್ಷ ಕರ್ಮ ನಿರ್ವಾಣದಲಿ ನಿಂತಿದೆ
ವರ್ತಮಾನ ನಮ್ರವಾಗಿ
ನಾಮಾವಶೇಷಗಳು ಅಳಿಸಿ ತೃಣದ
ನಿರ್ಗಮನಕೆ ತೆರೆದ
ಬಾಗಿಲು


ಅಕ್ಷರ ಶಾಸನ
ಓದಲಾಗದ ದೇವಭಾಷೆ
ಹಿಮಾಚ್ಛಾದಿತ ನೀರ ಪುಸ್ತಕದ ಬಿಳಿಯಾಳೆ
ಮೇಲೊಂದು ಸಾಲು
ಯಾರು ನೀನು!
ಹೇಳಲು ಬಾರದು ನೆರಳಿನೆದುರ
ಚೇತನಕೆ ತುಡಿತ
ಸುಮ್ಮನಿರಲಾಗದು

ಹಸಿದ ಹೊಟ್ಟೆ
ಮುಂದೆ ಹಸಿವೆಯೇ
ಅನ್ನ ಉಂಡು ತೃಪ್ತಿಗೊಂಡು
ಪ್ರೀತಿ
ಸ್ವಾದ, ಪರಿಮಳ ತುಂಬಿ
ಮನ ಹಗುರ ಜೀವಕೆ ವಿಷಾದವಿಲ್ಲ
ತೀರಿದೆಂತೆಲ್ಲಹಗೆ

ಕ್ಷಣ ಕಣ್ತೆರೆದು ಮುಚ್ಚುವ ವಾಸ್ತವದಿದಿರು
ತಲೆಬಾಗಿ ನಿಂತ ಛಾಯೆ ನಗುತಿದೆ
ಉತ್ತರ ಕಾಯುತ್ತಾಯಿರುವ
ಮುಪ್ಪಿಗೂ ತಿಳಿಯದ
ಸತ್ಯ
ಲೋಕವಿವೇಕದ ಜನರ ಬಾಯಲ್ಲಿ

ಕೆಲವರು ನನ್ನನ್ನು
'ಟಾಲ್‌ಸ್ಟಾಯ್' ಎಂದು
ಕರೆಯುತ್ತಾರೆ.





**ಟಿಪ್ಪಣಿ:** ರಷ್ಯಾದ ಮಹಾನ್ ಲೇಖಕ ಲಿಯೊ ಟಾಲ್‌ಸ್ಟಾಯ್ ಮನೆ ತೊರೆದು ಅನಾಮಿಕನಾಗಿ ಊರೂರು ಅಲೆಯುತ್ತಿದ್ದ. ಅವನ ಗುರುತು ಹಿಡಿಯದ ಅಪರಿಚಿತೆ ಒಬ್ಬಳು ಅವನನ್ನು, 'ಯಾರು ನೀನು, ನಿನ್ನ ಹೆಸರೇನು?' ಎಂದ ಪ್ರಶ್ನೆಗೆ ಟಾಲ್‌ಸ್ಟಾಯ್ ನಮ್ರವಾಗಿ ಹೇಳಿದ ಉತ್ತರದ ಒಂದು ವಾಕ್ಯ – People called me Tolstoy. ಆ ಕ್ಷಣ ಈ ಪದ್ಯದ ಸಾರ.